# ಯುಗಾದಿಪಾಡ್ಯ ಎಂದರೆ ಬ್ರಹ್ಮದೇವನು ಬ್ರಹ್ಮಾಂಡದ ನಿರ್ಮಿತಿಯನ್ನು ಮಾಡಿದ ದಿನ !



## ಆಂಗ್ಲರು ಹಿಂದೂಗಳ ಮೇಲೆ ಹೊರೆಸಿದ ದಿನಗಳನ್ನು ಬದಲಾಯಿಸಿರಿ ! - ಪ.ಪೂ. ಡಾಕ್ಟರ ಆಠವಲೆ



ಹಿಂದೂ ಧರ್ಮವು ಅನಂತ ಮತ್ತು ಅನಾದಿಯಾಗಿರುವುದರಿಂದ ಭಾರತ ದೇಶದಲ್ಲಿನ ವಿಶೇಷದಿನಗಳು ಈಶ್ವರನ ಬೇರೆ ಬೇರೆ ರೂಪಗಳಿಗೆ ಸಂಬಂಧಿಸಿವೆ. ಉದಾ. ಶ್ರೀ ಗಣೇಶ ಚತುರ್ಥಿಯು ವಿಶ್ವದಲ್ಲಿ ಶ್ರೀ ಗಣೇಶ ತತ್ತ್ವವು ಹೆಚ್ಚು ಪ್ರಮಾಣದಲ್ಲಿರುವಾಗ ಬರುತ್ತದೆ, ಅದೇ ರೀತಿ ಶಕ್ತಿತತ್ತ್ವವು ಹೆಚ್ಚು ಪ್ರಮಾಣದಲ್ಲಿರುವಾಗ ನವರಾತ್ರಿಯು ಬರುತ್ತದೆ, ಜ್ಞಾನ, ಭಕ್ತಿ ಮತ್ತು ವೈರಾಗ್ಯದಾಯಕ ಶಿವತತ್ತ್ವವು ಹೆಚ್ಚು ಪ್ರಮಾಣದಲ್ಲಿರುವಾಗ ಶಿವರಾತ್ರಿಯು ಬರುತ್ತದೆ. ತದ್ವಿರುದ್ಧವಾಗಿ ಇತರ ಪಂಥಗಳಲ್ಲಿನ ಮಹತ್ವದ ದಿನಗಳು ಪೃಥ್ವಿಯಲ್ಲಿ ಆಗಿಹೋದ ಘಟನೆಗಳಿಗೆ ಸಂಬಂಧಿಸಿರುತ್ತವೆ. ಮುಂದಿನ ಕೆಲವು ಉದಾಹರಣೆಗಳಿಂದ ಹಿಂದೂ ಧರ್ಮದ ಶ್ರೇಷ್ಠತೆ ಮತ್ತು ಭಾರತೀಯರಲ್ಲಿರುವ ಆಂಗ್ಲರ ಮಾನಸಿಕ ಗುಲಾಮಗಿರಿಯ ಮತ್ತು ವಿಚಾರಗಳ ಕ್ಷುದ್ರತನವು ನಮ್ಮ ಗಮನಕ್ಕೆ ಬರುತ್ತದೆ.

**ಅ.** ಭಾರತೀಯ ಸಂಸ್ಕೃತಿಯ ಮೇಲೆ ಆಧಾರಿತವಾಗಿರುವ 'ಶಾಲಿವಾಹನ ಶಕೆ' ಇತ್ಯಾದಿ ಶಕೆಗಳನ್ನು ವರ್ಷಗಣನೆಗೆ ತೆಗೆದುಕೊಳ್ಳದೇ ಕಾಲಕ್ಕೆ ಯಾವುದೇ ಸಂಬಂಧವಿಲ್ಲದ 'ಕ್ರಿ.ಶ.' ಪದ್ಧತಿಯನ್ನು ಅನುಕರಿಸುವುದು.

**ಆ.** ಯುಗಾದಿಪಾಡ್ಯದಂದು ನಿರ್ಮಿತಿಗೆ ಸಂಬಂಧಿತ ಪ್ರಜಾಪತಿ ಲಹರಿಗಳು ಪೃಥ್ವಿಯ ಮೇಲೆ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಬರುತ್ತವೆ, ಆದರೆ ಈ ದಿನವನ್ನು ವರ್ಷಾರಂಭದ ದಿನವೆಂದು ಆಚರಿಸದೇ ಯಾವುದೇ ತತ್ತ್ವದ ಆಧಾರ ಇಲ್ಲದ ಜನವರಿ 1 ಅನ್ನು ವರ್ಷಾರಂಭದ ದಿನವೆಂದು ಆಚರಿಸುವುದು.

**ಇ.** ಗುರುಪೂರ್ಣಿಮೆಯ ದಿನ ಗುರುತತ್ತ್ವವು ಪೃಥ್ವಿಯ ಮೇಲೆ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಬರುತ್ತದೆ. ಆದುದರಿಂದ ಶಿಕ್ಷಕರ ದಿನಾಚರಣೆಯನ್ನು ಗುರುಪೂರ್ಣಿಮೆಯ ದಿನ ಆಚರಿಸಬೇಕು. ಆದರೆ ಯಾವುದಕ್ಕೂ ಸಂಬಂಧ ಇಲ್ಲದಿರುವ ಮಾಜಿ ರಾಷ್ಟ್ರಪತಿ ಡಾ. ರಾಧಾಕೃಷ್ಣನ್‌ರವರ ಜನ್ಮದಿನವನ್ನು 'ಶಿಕ್ಷಕರ ದಿನಾಚರಣೆ' ಎಂದು ಆಚರಿಸುತ್ತಾರೆ.

**ಈ.** ಸೈನಿಕರ ದಿನಾಚರಣೆಯನ್ನು ವಿಜಯದಶಮಿಯ ದಿನ ಆಚರಿಸಿದರೆ ಅದು ಹೆಚ್ಚು ಯೋಗ್ಯವಾಗಿರುತ್ತದೆ.

**ಉ.** ಧನತ್ರಯೋದಶಿಯ ದಿನವನ್ನು ಆರೋಗ್ಯದೇವ ಧನ್ವಂತರಿಯ ದಿನವೆಂದು ಆಚರಿಸದೇ ಪಾಶ್ಚಾತ್ಯರ 'ಜಾಗತಿಕ ಆರೋಗ್ಯ ದಿನ'ವನ್ನು ಆಂಗ್ಲ ಮಾನಸಿಕ ಗುಲಾಮಗಿರಿಯಿಂದಾಗಿ ಆಚರಿಸುವುದು.

**ಊ.** ಶ್ರೀ ಲಕ್ಷ್ಮೀಪೂಜೆಯ ದಿನ ಶ್ರೀ ಲಕ್ಷ್ಮೀದೇವಿಯ ಲಹರಿಗಳು ಪೃಥ್ವಿಯ ಮೇಲೆ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಬರುತ್ತವೆ. ಆ ದಿನವನ್ನು ಆರ್ಥಿಕ ವರ್ಷದ ಆರಂಭದ ದಿನವೆಂದು ಪಾಲಿಸಬೇಕು. ಆದರೆ ಯಾವುದೇ ತತ್ತ್ವದ ಮೇಲಾಧಾರಿತವಾಗಿಲ್ಲದ ಎಪ್ರಿಲ್ 1 ಅನ್ನು ಆರ್ಥಿಕ ವರ್ಷದ ಆರಂಭದ ದಿನ ಎಂದು ಆಚರಿಸಲಾಗುತ್ತಿದೆ.

**ಎ.** ಗುರುತತ್ತ್ವದ ಉಪಾಸನೆಯನ್ನು ಮಾಡಲು ಗುರುವಾರವನ್ನು ವಾರದ ರಜಾದಿನವೆಂದು ಆಚರಿಸದೇ ಯಾವುದೇ ತತ್ತ್ವಕ್ಕೆ ಸಂಬಂಧವಿಲ್ಲದಿರುವ ರವಿವಾರವನ್ನು ರಜಾದಿನವೆಂದು ಆಚರಿಸುವುದು.

**ಐ.** ಮಕ್ಕಳೊಂದಿಗೆ ಯಾವುದೇ ರೀತಿಯ ಸಂಬಂಧವಿಲ್ಲದ ಪಂಡಿತ ನೆಹರೂರವರ ಜನ್ಮದಿನವನ್ನು 'ಮಕ್ಕಳ ದಿನ'ವೆಂದು ಆಚರಿಸಲು ಪ್ರಾರಂಭಿಸಲಾಯಿತು. ಅದರ ಬದಲು ಮಕ್ಕಳ ಆರೋಗ್ಯಕ್ಕಾಗಿ ಆಯುರ್ವೇದ ಗ್ರಂಥಗಳನ್ನು ರಚಿಸಿದ ಮಹರ್ಷಿ ಕಾಶ್ಯಪರ ಹೆಸರಿನಲ್ಲಿ ಮಕ್ಕಳ ದಿನವನ್ನು ಆಚರಿಸಿದರೆ ಅದು ಹೆಚ್ಚು ಯೋಗ್ಯವಾಗಿರುತ್ತದೆ.

ತದ್ವಿರುದ್ಧವಾಗಿ ಪಾಕಿಸ್ತಾನವು ಇಸ್ಲಾಂನ ಮೇಲಾಧಾರಿತ ಕಾಲಗಣನೆ ಮತ್ತು ಇತರ ವಿಷಯಗಳನ್ನು ಸ್ವೀಕರಿಸಿತು. ಉದಾ. ಹಿಜರಿ ಶಕೆಯನ್ನು ಪ್ರಾರಂಭಿಸಿತು, ಸಾಧನೆಗಾಗಿ ರವಿವಾರದ ಬದಲು ಶುಕ್ರವಾರವನ್ನು ರಜಾದಿನವೆಂದು ನಿರ್ಧರಿಸಿತು. ಇಸ್ಲಾಂ ಮೇಲಾಧಾರಿತ ರಾಜ್ಯಾಡಳಿತದಿಂದಾಗಿ ಚಿಕ್ಕದಾದ ಪಾಕಿಸ್ತಾನವು ದೊಡ್ಡ ಭಾರತವನ್ನು ಕ್ರಿಕೆಟ್ ಆಟದಿಂದ ಹಿಡಿದು ರಾಜಕಾರಣದವರೆಗೆ ಎಲ್ಲ ವಿಷಯದಲ್ಲಿ ಭಾರತವನ್ನು ಸೋಲಿಸುತ್ತದೆ.

ಈಶ್ವರೀ ರಾಜ್ಯದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಗೆ ಸಂಬಂಧವಿಲ್ಲದ ಇಂತಹ ಎಲ್ಲ ದಿನಗಳನ್ನು ನಾವು ಬದಲಾಯಿಸುವವರಿದ್ದೇವೆ.

**- ಪ.ಪೂ. ಡಾ. ಜಯಂತ ಆಠವಲೆ.**

## ಯುಗಾದಿಪಾಡ್ಯ : ಬ್ರಹ್ಮದೇವನು ಬ್ರಹ್ಮಾಂಡದ ನಿರ್ಮಿತಿ ಮಾಡಿದ ದಿನ

**ಸನಾತನದ ಸಾಧಕಿ ಕು. ಮಧುರಾ ಭೋಸಲೆ ಇವರಿಗೆ ಯುಗಾದಿ ಪಾಡ್ಯ ಮತ್ತು ಬ್ರಹ್ಮದೇವರ ಕುರಿತು ಈಶ್ವರನ ಕೃಪೆಯಿಂದ ಪ್ರಾಪ್ತವಾದ ಜ್ಞಾನವನ್ನು ಇಲ್ಲಿ ನೀಡುತ್ತಿದ್ದೇವೆ.**

### ಯುಗಾದಿಪಾಡ್ಯ

ಯುಗಾದಿಪಾಡ್ಯ ಎಂದರೆ ಬ್ರಹ್ಮದೇವನು ಬ್ರಹ್ಮಾಂಡದ ನಿರ್ಮಿತಿಯನ್ನು ಮಾಡಿದ ದಿನ. ಬ್ರಹ್ಮದೇವನ ಹೆಸರಿನಿಂದಲೇ 'ಬ್ರಹ್ಮಾಂಡ' ಈ ಹೆಸರು ಬಂದಿದೆ. ಬ್ರಹ್ಮತತ್ತ್ವವು ಸತ್ಯಯುಗದಲ್ಲಿ ಮೊದಲ ಬಾರಿಗೆ ಯುಗಾದಿ ಪಾಡ್ಯದ ದಿನ ನಿರ್ಗುಣದಿಂದ ನಿರ್ಗುಣ-ಸಗುಣ ಮಟ್ಟಕ್ಕೆ ಬಂದು ಪೃಥ್ವಿಯಲ್ಲಿ ಕಾರ್ಯನಿರತವಾಯಿತು. ಸತ್ಯ ಮತ್ತು ತ್ರೇತಾ ಯುಗಗಳಲ್ಲಿ ಬ್ರಹ್ಮದೇವನ ಬಗ್ಗೆ ಅನೇಕ ಋಷಿಮುನಿಗಳಿಗೆ ಮತ್ತು ದಾನವರಿಗೆ ತಿಳಿದಿತ್ತು. ದ್ವಾಪಾರಯುಗದ ನಂತರ ಬ್ರಹ್ಮದೇವನ ಮಹತ್ವವು ಕ್ರಮೇಣ ಕಡಿಮೆಯಾಯಿತು. ಕಲಿಯುಗದಲ್ಲಿರುವ ಜೀವಗಳಿಗೆ ಸೃಷ್ಟಿಕರ್ತ ಬ್ರಹ್ಮದೇವನ ಬಗ್ಗೆ ಸ್ವಲ್ಪವೂ ಮಾಹಿತಿಯಿಲ್ಲ.

**ಬ್ರಹ್ಮದೇವರಿಂದ ಯುಗಾದಿಯ ದಿನ ಸತ್ತ್ವಗುಣ, ಚೈತನ್ಯ, ಜ್ಞಾನ ಲಹರಿ ಮತ್ತು ಸಗುಣ-ನಿರ್ಗುಣ ಬ್ರಹ್ಮತತ್ತ್ವಗಳು ಶೇ. 50 ಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಪ್ರಕ್ಷೇಪಿಸುತ್ತವೆ :** ಇತರ ದಿನಗಳ ತುಲನೆಯಲ್ಲಿ ಯುಗಾದಿಯ ದಿನ ಬ್ರಹ್ಮದೇವರಿಂದ ಸತ್ತ್ವಗುಣ, ಚೈತನ್ಯ, ಜ್ಞಾನಲಹರಿಗಳು ಮತ್ತು ಸಗುಣ-ನಿರ್ಗುಣ ಬ್ರಹ್ಮತತ್ತ್ವಗಳು ಶೇ. 50 ಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಪ್ರಕ್ಷೇಪಿಸುತ್ತವೆ. ಈ ಲಹರಿಗಳನ್ನು ಗ್ರಹಿಸಲು ಯುಗಾದಿಯ ದಿನ ಮನೆಯ ಮುಂದೆ ಬ್ರಹ್ಮಧ್ವಜವನ್ನು ಸ್ಥಾಪಿಸುತ್ತಾರೆ. ಬ್ರಹ್ಮಧ್ವಜದ ಮೂಲಕ ಈ ಲಹರಿಗಳು ಮತ್ತು ಸಗುಣ-ನಿರ್ಗುಣ ಬ್ರಹ್ಮತತ್ತ್ವವು ಮನೆಯೊಳಗೆ ಸಹಜವಾಗಿ ಪ್ರವೇಶಿಸಬಲ್ಲದು. ಬ್ರಹ್ಮತತ್ತ್ವವು ಧ್ವಜದಲ್ಲಿ ಪ್ರವೇಶಿಸಿದ ನಂತರ ಧ್ವಜಕ್ಕೆ ಹಾಕಿದ ಹೂವಿನ ಹಾರ, ಸಕ್ಕರೆಯಿಂದ ತಯಾರಿಸಿದ ಮಾಲೆ (ಬತ್ತಾಸು) ತಾಮ್ರದ ಕಲಶ ಮತ್ತು ಮಾವಿನಎಲೆಗಳಲ್ಲಿ ಈ ತತ್ತ್ವವು ಆಕರ್ಷಿತವಾಗುತ್ತದೆ ಮತ್ತು ಆ ವಸ್ತುಗಳು ಬ್ರಹ್ಮತತ್ತ್ವದಿಂದ ಯುಕ್ತಸಂಪನ್ನವಾಗುತ್ತವೆ. ಈ ವಸ್ತುಗಳನ್ನು ಸೇವನೆ ಮಾಡುವುದರಿಂದ ಅಥವಾ ವಾಸ್ತುವಿನಲ್ಲಿಡುವುದರಿಂದ ಜೀವಗಳಿಗೆ ಅವುಗಳಿಂದ ಲಾಭವಾಗುತ್ತದೆ. ಮನೆಯ ಮುಂದೆ ಸೂರ್ಯಾಸ್ತದ ವರೆಗೆ ಬ್ರಹ್ಮಧ್ವಜವನ್ನು ಇರಿಸುವುದರಿಂದ ಸತ್ತ್ವಗುಣ, ಚೈತನ್ಯ, ಜ್ಞಾನ ಲಹರಿ ಮತ್ತು ಸಗುಣ-ನಿರ್ಗುಣ ಬ್ರಹ್ಮತತ್ತ್ವಗಳು ದಿನವಿಡೀ ಮನೆಯೊಳಗೆ ಬರುತ್ತವೆ ಹಾಗೂ ಮನೆಯಲ್ಲಿ ಸಂಗ್ರಹವಾಗುತ್ತವೆ. ವಾಸ್ತುವಿನಲ್ಲಿರುವ ಮತ್ತು ವಾಸ್ತುವಿನಲ್ಲಿ ಬರುವ ಜೀವಗಳಿಗೆ ವರ್ಷವಿಡೀ ಇದರ ಲಾಭವಾಗುತ್ತದೆ. ಬ್ರಹ್ಮತತ್ತ್ವದ ಲಾಭವಾಗಬೇಕಾದರೆ ಜೀವಗಳಲ್ಲಿ ಶೇ. 40 ರಷ್ಟು ಭಾವವಿರಬೇಕು. ಜೀವಗಳಲ್ಲಿ ಭಾವ ಇದ್ದರೆ ಮಾತ್ರ ಅವರಿಗೆ ಪ್ರತಿಯೊಂದು ಹಬ್ಬ ಮತ್ತು ಈಶ್ವರನಿಂದ ಆಯಾಯ ಸಮಯದಲ್ಲಿ ಹರಡುವ ಜ್ಞಾನ ಲಹರಿ, ಶಕ್ತಿ, ಚೈತನ್ಯ, ಸತ್ತ್ವಲಹರಿ ಮತ್ತು ವಿಶಿಷ್ಟ ದೇವತೆಗಳ ತತ್ತ್ವಲಹರಿಗಳ ಸಂಪೂರ್ಣ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೆ.

**- ಈಶ್ವರ (ಕು. ಮಧುರಾ ಭೋಸಲೆಯವರ ಮಾಧ್ಯಮದಿಂದ 5.3.2005 ಮತ್ತು 9.3.2005)**

## ಧರ್ಮಜಾಗೃತಿ ಸಭೆಗಳಿಗೆ ಧರ್ಮಾಭಿಮಾನಿಗಳಿಂದ ಪ್ರೋತ್ಸಾಹ

**ಗದಗ :** ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ಏಪ್ರಿಲ್ 13 ರಂದು ಗದಗಿನಲ್ಲಿ ಜರುಗಲಿರುವ ಧರ್ಮಸಭೆಯ ಪೂರ್ವಭಾವಿ ಸಮಾಲೋಚನಾ ಸಭೆಯು ದಿನಾಂಕ 17 ಮಾರ್ಚ್‌ರಂದು ಶ್ರೀ ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ಜರುಗಿತು. ಈ ಸಭೆಗೆ ಒಟ್ಟು 111 ಧರ್ಮಾಭಿಮಾನಿಗಳು ಉಪಸ್ಥಿತರಿದ್ದರು. ಈ ಸಭೆಗೆ ಶ್ರೀರಾಮಸೇನೆಯ ಶ್ರೀ. ವಿಶ್ವನಾಥ, ರಾ.ಸ್ವ.ಸಂಘದ 90 ವರ್ಷ ವಯಸ್ಸಿನ ಶ್ರೀ. ಎಲ್. ಡಿ. ಪವಾರ್, ನಿವೃತ್ತ ಪ್ರಾಂಶುಪಾಲರಾದ ಶ್ರೀ. ಬೇಲೂರು ಹಾಗೂ ಸ್ಥಳೀಯ ಹಿಂದೂ ಧರ್ಮಾಭಿಮಾನಿಗಳು ಸಕ್ರೀಯವಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ. ವಿಶ್ವನಾಥರವರು, ಧರ್ಮಸಭೆಗಾಗಿ ಶ್ರೀರಾಮಸೇನೆಯ ಸ್ಥಳೀಯ ಎಲ್ಲ ಕಾರ್ಯಕರ್ತರನ್ನು ಧರ್ಮಸಭೆಗೆ ಕರೆದುಕೊಂಡು ಬರುವುದಾಗಿ ತಿಳಿಸಿದರು. ವಿಶೇಷವೆಂದರೆ ಈ ಸಭೆಯಲ್ಲಿ ಸ್ಥಳೀಯ ಹಿಂದೂ ಧರ್ಮಾಭಿಮಾನಿ ಗಳಿಂದ ಉತ್ತಮ ಬೆಂಬಲ ಸಿಕ್ಕಿತು.

**ಅ.** ಸಭೆಯಲ್ಲಿ ಪಾಲ್ಗೊಂಡ ಅನೇಕ ಸ್ಥಳೀಯ ಧರ್ಮಾಭಿಮಾನಿಗಳು ಕಾರ್ಯಕ್ರಮದ ಪ್ರಯುಕ್ತ ಬೇಕಾಗುವ 1 ತಿಂಗಳ ಅಕ್ಕಿ, ಎಣ್ಣೆ, ಕಾಯಿಪಲ್ಲೆ ಇತ್ಯಾದಿಗಳನ್ನು ನೀಡುವೆವು ಎಂದು ಹೇಳಿ ತಮ್ಮ ಸಂಪೂರ್ಣ ಬೆಂಬಲವನ್ನು ಸೂಚಿಸಿದರು. **(ಇಂತಹ ಧರ್ಮಾಭಿಮಾನಿಗಳೇ ಹಿಂದೂಧರ್ಮದ ಶಕ್ತಿಯಾಗಿದ್ದಾರೆ - ಸಂಪಾದಕರು)**

**ಆ.** ನನ್ನ ಚತುಷ್ಚಕ್ರವಾಹನವನ್ನು ಧರ್ಮಸಭೆಯ ಸೇವೆಗಾಗಿ ನೀಡಿ ನಾನು ದ್ವಿಚಕ್ರವನ್ನು ಉಪಯೋಗಿಸುವೆನು. ಸ್ಥಳೀಯ ವರ್ತಕರನ್ನು ಸೇರಿಸಿ ಅವರಿಗೆ ಧರ್ಮಸಭೆಯ ಮಹತ್ತ್ವವನ್ನು ತಿಳಿಸಿ ಅವರನ್ನೂ ಸಹಭಾಗಿಯಾಗಿಸುವೆನು - **ಉದ್ಯಮಿ ಶ್ರೀ. ಯಶೋಧರ ಗೌಡ ಪಾಟೀಲ.**

ಮರುದಿನ ಶ್ರೀ. ಪಾಟೀಲರು ತಮ್ಮ ಚತುಷ್ಚಕ್ರವಾಹನದೊಂದಿಗೆ ಧರ್ಮಸಭೆಯ ಸೇವೆಗೆ ಉಪಸ್ಥಿತರಿದ್ದರು ಮತ್ತು ಅವರು ಸಮಾಜದವರನ್ನು ಭೇಟಿಯಾಗಿ ಧರ್ಮಸಭೆಯ ಮಾಹಿತಿಯನ್ನು ಉತ್ತಮವಾಗಿ ಮಂಡಿಸತೊಡಗಿದರು. **(ಇಂತಹ ಸಕ್ರಿಯ ಧರ್ಮಾಭಿಮಾನಿಗಳೇ ನಿಜವಾದ ಹಿಂದೂಗಳಾಗಿದ್ದಾರೆ - ಸಂಪಾದಕರು)** ಅಲ್ಲದೇ ಅಲ್ಲಿನ 50 ಆಟೋ ಚಾಲಕರು ತಮ್ಮ ಆಟೋರಿಕ್ಷಾದ ಮೇಲೆ ಧರ್ಮಸಭೆಯ ಫಲಕಗಳನ್ನು ಹಾಕಿ ಧರ್ಮಸೇವೆಯನ್ನು ಮಾಡುವೆವು ಎಂದು ಹೇಳಿದರು.

**ಶಿರಸಿ :** ದಿನಾಂಕ 24.3.2008 ರಂದು ಧರ್ಮಸಭೆಯ ಪೂರ್ವಭಾವಿ ಸಮಾಲೋಚನೆ ಸಭೆಯು ಶಿರಸಿಯ ಶ್ರೀಗೋಪಾಲಕೃಷ್ಣ ದೇವಸ್ಥಾನದಲ್ಲಿ ಜರುಗಿತು. ಈ ಸಂದರ್ಭದಲ್ಲಿ ಹಿಂದೂ ಜನಜಾಗೃತಿ ಸಮಿತಿ, ಹಿಂದೂ ಜಾಗರಣಾ ವೇದಿಕೆ, ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳೀಯ ಪುರಸಭಾ ಸದಸ್ಯರಾದ ಸೌ. ವೀಣಾ ಶೆಟ್ಟಿ, ಶ್ರೀ. ನಂದನಸಾಗರ, ಅಡ್ವೋಕೇಟ್ ನಾಗರಾಜ ಭಟ್‌ರವರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಉಪಸ್ಥಿತರಿದ್ದ ಧರ್ಮಾಭಿಮಾನಿಗಳು ಧರ್ಮಸಭೆಯನ್ನು ನಡೆಸಲು ಎಲ್ಲರೂ ತಮ್ಮ ಸಹಕಾರವನ್ನು ವ್ಯಕ್ತಪಡಿಸಿದರು.

Printed and Published by Shri. K. Umesh Shenoy on behalf of Dicholi Sanatan Sanstha and Printed at Digantha Mudrana Ltd. 5-184/185, Industrial Estate, Yeyyadi, Mangalore 575 008 and Published at Prabhu Nivas Compound, Boloor, Mangalore 575 006. Editor : Shri. Prithviraj Purushotham Hazare. Address for correspondence : Sanatan Sevakendra, Prabhu Nivas Compound,Boloor,Mangalore575006. Tel : (0824) 3259191, 3250191. RNI Registration No. 70362/1999

**ಸಾಪ್ತಾಹಿಕ ಸನಾತನ ಪ್ರಭಾತಕ್ಕೆ ಚಂದಾದಾರರಾಗಿರಿ ! ವಾರ್ಷಿಕ ಚಂದಾ : ರೂ. 135 / -**

**ಸಂಪರ್ಕ ವಿಳಾಸ :** ಸನಾತನದ ಮೂಲ್ಕಿ ಆಶ್ರಮ, ನಂ. 22-18, ಚಿತ್ರಾಪು ಗ್ರಾಮ, ಮೂಲ್ಕಿ - 574 154. ದೂ. ಸಂ. (0824) 3259191. E-mail : kannada@sanatan.org

| | | | | | |
|---|---|---|---|---|---|
| ಹುಬ್ಬಳ್ಳಿ | - 9341635881 | ಉಡುಪಿ | - 9341635913 | ಬೆಂಗಳೂರು | - 9342014262 |
| ಮಂಗಳೂರು | - 9341635919 | ಶಿವಮೊಗ್ಗ | - 9448814269 | ಥಾಣೆ | - 9892502236 |


